## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೆರೆ ಸಂಜೀವಿನಿ ಕಾರ್ಯಕ್ರಮದಡಿ ಗದಗ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಕೆರೆಯ ಪುನಶ್ಚೇತನ ಕಾಮಗಾರಿಗೆ ಅನುಮೋದನೆ ನಿಡುವ ಕುರಿತು

ಓದಲಾಗಿದೆ: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆದೇಶ.

**ಪ್ರಸ್ತಾವನೆ:**

ಕೆರೆ ಸಂಜೀವಿನಿ ಕಾರ್ಯಕ್ರಮದಡಿ ಗದಗ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಕೆರೆಯ ಪುನಶ್ಚೇತನ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಅನುದಾನ ಬಿಡುಗಡೆಗೊಳಿಸುವಂತೆ ಬಂದಿರುವ ಪ್ರಸ್ತಾವನೆಯನ್ನು ಗಮನಿಸಿದೆ.

ಪ್ರಸ್ತಾವಿತ ಗದಗ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಕೆರೆಯ ಪುನಶ್ಚೇತನ ಕಾಮಗಾರಿಯನ್ನು ಕೆರೆ ಸಂಜೀವಿನಿ ಕಾರ್ಯಕ್ರಮದಡಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:159:ಆರ್‌ಆರ್‌ಸಿ:2016, ಬೆಂಗಳೂರು, ದಿನಾಂಕ:6-3-2017.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕೆರೆ ಸಂಜೀವಿನಿ ಕಾರ್ಯಕ್ರಮದಡಿ ಗದಗ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಕೆರೆಯ ಪುನಶ್ಚೇತನ ಕಾಮಗಾರಿಯನ್ನು ರೂ.5.00ಲಕ್ಷಗಳ (ರೂಪಾಯಿಗಳು ಐದು ಲಕ್ಷಗಳು ಮಾತ್ರ) ಅನುದಾನದಲ್ಲಿ ಗದಗ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಕೆರೆಯ ಪುನಶ್ಚೇತನ ಕಾಮಗಾರಿಯನ್ನು ಕೈಗೊಳ್ಳಲು ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

**ಷರತ್ತುಗಳು:-**

1. ಕೆರೆ ಸಂಜೀವಿನಿ ಕಾರ್ಯಕ್ರಮದಡಿ ಗದಗ ಜಿಲ್ಲೆ ಗದಗ ತಾಲ್ಲೂಕಿನ ಗದಗ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಕೆರೆಯ ಪುನಶ್ಚೇತನ ಕಾಮಗಾರಿಯನ್ನು ತುರ್ತು ಹಾಗೂ ಅಗತ್ಯತೆ ಆಧಾರದ ಮೇರೆಗೆ ಹಂಚಿಕೆ ಮಿತಿಗೊಳಪಟ್ಟು ಪಂ.ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನಗೊಳಿಸತಕ್ಕದ್ದು.

2. ಈ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನವನ್ನು ಕೆರೆ ಹೂಳೆತ್ತುವ ಕಾಮಗಾರಿಗಳಿಗೆ ಜೆಸಿಬಿ ಯಂತಹ ಯಂತ್ರಗಳನ್ನು ಪ್ರತಿ ಗಂಟೆಗೆ ಬಾಡಿಗೆ ಆಧಾರದ ಮೇಲೆ ಪಡೆದುಕೊಂಡಂತಹ ವೆಚ್ಚಗಳನ್ನು ಮಾತ್ರ ಭರಿಸುವುದು ಯಾವುದೇ ಕಾರಣಕ್ಕೂ ಕೆರೆ ಹೂಳು ಸಾಗಾಣಿಕೆ ವೆಚ್ಚವನ್ನು ಭರಿಸತಕ್ಕದ್ದಲ್ಲ.

3. ಈ ಯೋಜನೆಯಡಿ 2016-17 ನೇ ಸಾಲಿನಲ್ಲಿ ಬರಪೀಡಿತವೆಂದು ಘೋಷಣೆಯಾಗಿರುವ 139 ತಾಲ್ಲೂಕುಗಳಲ್ಲಿ ಕೆರೆಗಳನ್ನು ಆಯ್ಕೆ ಮಾಡುವುದು.

4. ಈ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಕೆರೆಗಳನ್ನು ಕೈಗೆತ್ತಿಕೊಳ್ಳಬಹುದು.

5. ಸ್ಥಳೀಯ ರೈತರು ಕೆರೆ ಹೂಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಸಾಗಾಣಿಕೆ ಮಾಡಲು ಇಚ್ಛಿಸುವಂತಹ ಕೆರೆಗಳಲ್ಲಿ ಮತ್ರ ಹೂಳು ತೆಗೆಯುವ ಕಾಮಗಾರಿ ಕೈಗೆತ್ತಿಕೊಳ್ಳತಕ್ಕದ್ದು.

6. ಆಯ್ಕೆ ಮಾಡಕೊಂಡ ಕೆರೆಯ ಕಾಮಗಾರಿಯನ್ನು ಉದ್ಯೋಗ ಖಾತ್ರಿ ಯೋಜನೆಯಡಿ ತೆಗೆದುಕೊಂಡಿರದ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದೃಢೀಕರಿಸುವುದು.

7. ಬೇರೆ ಬೇರೆ ಇಲಾಖೆಗಳಿಂದ ತೆಗೆದುಕೊಳ್ಳುತ್ತಿರುವ ಕೆರೆ ಹೂಳೆತ್ತುವ ಕಾಮಗಾರಿಗಳಿಗೂ (ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಸೇರಿದಂತೆ) ಹಾಗೂ ಈ ಕಾರ್ಯಕ್ರಮದಡಿ ತೆಗೆಯುವ ಕಾಮಗಾರಿಗೂ ಅತೀ ವ್ಯಾಪ್ತಿ (ಓಿಡ್) ಆಗದಂತೆ ನೋಡಿಕೊಳ್ಳುವುದು ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿ ಆಗಿರುತ್ತದೆ.

8. ಈ ಯೋಜನೆಯಡಿ ಕೈಗೊಳ್ಳುವ ಕೆರೆ ಹೂಳೆತ್ತುವ ಕಾಮಗಾರಿಗಳಿಗೆ ಜೆ.ಸಿ.ಬಿ. ರೀತಿಯ ಯಂತ್ರಗಳನ್ನು ಪ್ರತೀ ಘಂಟೆಗೆ ಬಾಡಿಗೆಯ ಆಧಾರದ ಮೇಲೆ ಪಡೆದುಕೊಂಡು ವೆಚ್ಚವನ್ನು ಭರಿಸುವುದು. ಯಾವುದೇ ಕಾರಣಕ್ಕೂ ಕೆರೆ ಹೂಳು ಸಾಗಾಣಿಕೆ ವೆಚ್ಚವನ್ನು ಭರಿಸತಕ್ಕದ್ದಲ್ಲ.

9. ಅಂದಾಜು ಸಿದ್ಧಪಡಿಸುವಾಗ ಕೆರೆ ಹೂಳು ತೆಗೆಯುವುದನ್ನು ಇಲಾಖೆಯ ಅನುಸೂಚಿತ ದರದಂತೆ (ಡಿ.ಇಸ್.ಆರ್) ಮಾಡದೆ, ಜೆ.ಸಿ.ಬಿ. ರೀತಿಯ ಯಂತ್ರೋಪಕರಣಗಳ ಗಂಟೆವಾರು ಬಾಡಿಗೆ ದರ ಹಾಗೂ ಅದರಿಂದ ಆಗುವ ಪ್ರತೀ ಘಂಟೆ ಕೆಲಸವನ್ನು ಹಾಗೂ ಕೆರೆ ಹೂಳಿನ ಪರಿಮಾಣವನ್ನು ಪರಿಗಣಿಸಿ ಅಂದಾಜು ಪತ್ರಿಕೆಯನ್ನು ತಯಾರು ಮಾಡತಕ್ಕದ್ದು. ಕಾಮಗಾರಿಯ ಅಂದಾಜನ್ನು ಸಣ್ಣ ನೀರಾವರಿ, ಲೋಕೋಪಯೋಗಿ ಹಾಗೂ ಮತ್ತಿತರೆ ಇಲಾಖೆಗಳ ಯಾವುದೇ ಅನುಸೂಚಿತ ದರದಂತೆ ತಯಾರಿಸತಕ್ಕದ್ದಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸಲಾಗಿದೆ.

10. ಸಂಬಂಧಕಪಟ್ಟ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗವು ಅನುಷ್ಠಾನ ಇಲಾಖೆ ಆಗಿರುತ್ತದೆ.
11. ಕಾಮಗಾರಿಯ ಅಂದಾಜನ್ನು ಸಿದ್ಧಪಡಿಸುವ ಮತ್ತು ಕಾಮಗಾರಿಗಳ ಮೇಲುಸ್ತುವಾರಿ ಮಾಡುವುದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿ ಆಗಿರುತ್ತದೆ.
12. ಈ ಯೋಜನೆಗೆ ಹೆಚ್ಚುವರಿ ರಾಜ್ಯ ವಿಪತ್ತು ನಿರ್ವಹಣೆ ನಿಧಿಯಿಂದ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಬಿಡುಗಡೆ ಮಾಡುವುದು.

13. ತದನಂತರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬರದ ತೀವ್ರತೆಗೆ ಅನುಗುಣವಾಗಿ ಮತ್ತು ಬತ್ತಿ ಹೋಗಿರುವ ಉಪಯುಕ್ತ ಕೆರೆಗಳ ಸಂಖ್ಯೆಗೆ ಅನುಗುಣವಾಗಿ ತೀವ್ರ ಬರದಿಂದ ಬಳಲುತ್ತಿರುವ ಜಿಲ್ಲೆಗೆ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡುವುದು.

14. ಈ ಯೋಜನೆಯ ಕಾಮಗಾರಿಗಳಿಗೆ ಬಾಡಿಗೆ ಆಧಾರದಲ್ಲಿ ಜೆ.ಸಿ.ಬಿ. ರೀತಿಯ ಯಂತ್ರೋಪಕರಣಗಳನ್ನು ಪಡೆಯುವುದಕ್ಕೆ ಕೆ.ಟಿ.ಟಿ.ಪಿ. ಕಾಯ್ದೆಯಕಲಂ 4(ಎ) ರಡಿ ವಿನಾಯಿತಿಯನ್ನು ನೀಡಲಾಗಿದೆ.

ಮೇಲ್ಕಂಡ ಮಾರ್ಗಸೂಚಿಗಳೊಂದಿಗೆ ಸರ್ಕಾರವು ಕೆರೆ ಸಂಜೀವಿನಿ-2 ಕಾರ್ಯಕ್ರಮವನ್ನು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುಷ್ಠಾನಗೊಳಿಸಲು ರೂ.50.00 ಕೋಟಿಗಳನ್ನು ನಿಗಧಿಪಡಿಸಿದ್ದು, ಅದರಂತೆ ಜಿಲ್ಲಾ ಪಂಚಾಯಿತಿಗಳಿಗೆ ಕೆರೆ ಸಂಜೀವಿನಿ-2 ರ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನವನ್ನು ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಬಳಸುವುದು. ವೆಚ್ಚ ಮಾಡಿದ್ದಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ. ಭೂವನಹಳ್ಳಿ ನಾಗರಾಜ್)
ನಿರ್ದೇಶಕರು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲಾ ಪಂಚಾಯತ್ ~~ಗಳ~~ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಗದಗ
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
3. ~~ಎಲ್ಲಾ~~ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು, ಧಾರವಾಡ
4. ~~ಎಲ್ಲಾ~~ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು, ಗದಗ

**ಪ್ರತಿಯನ್ನು ಮಾಹಿತಿಗಾಗಿ:**

5. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
6. ಮಹಾಲೇಖಪಾಲರು (ಆಡಿಟ್-1&2) ಕರ್ನಾಟಕ, ಬೆಂಗಳೂರು
7. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನ ಸೌಧ, ಬೆಂಗಳೂರು.
8. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ,ಬೆಂಗಳೂರು.
10. ಸರ್ಕಾರದ ಪಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.